ಮುದ್ದೇಬಿಹಾಳ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

43 (388) ಶ್ರೀ ಅಪ್ಪಾಜಿ ಚೆನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ವರ್ಷಗಳಿಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಹಾಗಿಲ್ಲದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಬಂದಿರುತ್ತದೆ.

ಆ) ಮುದ್ದೇಬಿಹಾಳ ಪಟ್ಟಣಕ್ಕೆ ಮುದ್ನಾಳ ಕೆರೆಯನ್ನು ಮೂಲವಾಗಿಟ್ಟುಕೊಂಡು (ಆಲಮಟ್ಟಿ ಎಡದಂಡೆ ನಾಲೆ ಮೂಲವಾಗಿಟ್ಟುಕೊಂಡು) ವರ್ಧಿತ ನೀರು ಸರಬರಾಜು ಯೋಜನೆಯನ್ನು ರೂ. 220.00 ಲಕ್ಷಗಳಿಗೆ ತಯಾರಿಸಿದ್ದು ಈ ಯೋಜನೆಗೆ ಸರ್ಕಾರಿ ಆದೇಶ ಸಂ. ಯುಡಿಡಿ/30/ಯುಡಬ್ಲ್ಯೂಎಸ್/2005/ ದಿನಾಂಕ 06.11.2006ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಯನ್ನು ಫೆಬ್ರವರಿ 2010ರಲ್ಲಿ ಚಾಲನೆಗೊಳಿಸಲಾಗಿದೆ. ಇದರಿಂದ ಮುದ್ದೆಬಿಹಾಳ ಪಟ್ಟಣದ ನೀರಿನ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸಲಾಗಿದೆ.

ಇ) ಪಟ್ಟಣದ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಮುದ್ದೇಬಿಹಾಳ ಪಟ್ಟಣಕ್ಕೆ ಕೃಷ್ಣಾ ನದಿಯನ್ನು ಮೂಲವಾಗಿಟ್ಟುಕೊಂಡು ಸಮಗ್ರ ನೀರು ಸರಬರಾಜು ಯೋಜನೆಯ ಅಂದಾಜು ಪಟ್ಟಿಯನ್ನು ರೂ. 1336.00 ಲಕ್ಷಗಳಿಗೆ ತಯಾರಿಸಿದ್ದು, ಈ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ಯುಡಿಡಿ / 171 / ಯುಡಬ್ಲ್ಯೂಎಸ್ / 2008 / ದಿನಾಂಕ: 04.09.2008ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಯ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದೆ. ಈ ಟೆಂಡರ್‌ನ ಶೇ. 65ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದ

ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯನ್ನು 2011–12ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಚಾಲನೆಗೊಳಿಸಿದ ನಂತರ ಮುದ್ದೇಬಿಹಾಳ ಪಟ್ಟಣದ ನೀರಿನ ಸಮಸ್ಯೆಯು ಸಂಪೂರ್ಣವಾಗಿ ಪರಿಹಾರವಾಗಲಿದೆ.

ಶ್ರೀ ಅಪ್ಪಾಜಿ ಚೆನ್ನಬಸವರಾಜ್ ಶಂಕರರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 2011–12ಕ್ಕೆ ಪೂರ್ತಿಗೊಳಿಸಲಿಕ್ಕೆ ಇಚ್ಛಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಟೆಂಡರ್ ಕಂಡೀಷನ್ ಪ್ರಕಾರ ಈ ಕಾಮಗಾರಿ ಮುಗಿದು ಆರು ತಿಂಗಳಾಗಬೇಕಾಗಿತ್ತು. ಇವತ್ತಿಗೂ ಸಹ ಕೆಲಸ ಪೂರ್ತಿಗೊಂಡಿಲ್ಲ. ಬಹಳ ನಿಧಾನವಾಗಿ ಕೆಲಸವಾಗುತ್ತಿದೆ. ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ. ಇದು ಪ್ರಾರಂಭವಾಗಿದ್ದು 2005ರಲ್ಲಿ ಈಗಾಗಲೇ ಐದು ವರ್ಷ ಗತಿಸಿ ಆರನೇ ವರ್ಷ ಆಯಿತು. ಆದರೆ, ಕಾಮಗಾರಿ ಪ್ರಾರಂಭ ಮಾಡಲಿಕ್ಕೆ ನಿಮ್ಮ ಟೆಂಡರ್ procedure ಎಲ್ಲಾ ಮುಗಿದು ಮೂರು ವರ್ಷಗಳು ಮುಗಿದು ನಾಲ್ಕು ವರ್ಷ ಹತ್ತಿರತ್ತಿರ ಬರುತ್ತಿದೆ. ಮುದ್ದೇಬಿಹಾಳ ನಗರ ಒಂದು ದೊಡ್ಡ ನಗರ. ಪ್ರತಿ ನಿತ್ಯವೂ ನೀರಿಗೆ ಪರದಾಡತಕ್ಕಂಥ ಪರಿಸ್ಥಿತಿಯಿದೆ. ನೀವು ಇದನ್ನು ತೀವ್ರಗತಿಯಲ್ಲಿ ಮುಗಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮತ್ತು ಯಾವಾಗ ಮುಗಿಸುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕು. 2011–2012ರಲ್ಲಿ ಮುಗಿಸುತ್ತೇವೆಂದು ಹೇಳುವುದು ಬೇಡ. ಇದುವರೆವಿಗೂ ನಿಮ್ಮ purifying plant ಆಗಲಿ, ಮತ್ತೊಂದು ಆಗಲಿ ಯಾವುದೂ ಕೂಡ ಇವತ್ತಿನವರೆವಿಗೂ ಪ್ರಾರಂಭವಾಗಿಲ್ಲ. ಅದಕ್ಕಾಗಿ ತಾವು ದಯವಿಟ್ಟು ಸ್ಪಷ್ಟವಾದ ಉತ್ತರ ನೀಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಒಂದು ಕಾರ್ಯ ಮುಗಿದು ಆರು ತಿಂಗಳಾಗಬೇಕಾಗಿತ್ತು. ಈಗಲೂ ಕೂಡ 2011–12ನೇ ಸಾಲಿನಲ್ಲಿ ಪೂರ್ತಿಗೊಳಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ, ಇದು ಬಹಳ ವಿಳಂಬವಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಒಂದು ಕಾರ್ಯ ಸೆಪ್ಟೆಂಬರ್ 2010ರಲ್ಲಿ ಮುಗಿಯಬೇಕಾಗಿತ್ತು. ಇದು ಕೆಲವು ಕಾರಣಗಳಿಂದ ವಿಶೇಷವಾಗಿ ನೀರಾವರಿ ಇಲಾಖೆ ಮತ್ತು ನಮ್ಮಲ್ಲಿ ಒಂದು ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವುದರಿಂದ.

ಶ್ರೀ ಅಪ್ಪಾಜಿ ಚೆನ್ನಬಸವರಾಜ್ ಶಂಕರರಾವ್ ನಾಡಗೌಡ: ಮಾನ್ಯ ಸಚಿವರೆ, if you don't mind ನಾನು ಹೇಳುತ್ತೇನೆ. ಮೊದಲನೆಯದು ಏನು ಇದೆಯಲ್ಲ ಹತ್ತಿರ ಇರತಕ್ಕಂಥ ಕೆರೆಯಿಂದ ನೀರನ್ನು ಎತ್ತಬೇಕು, ಅಲ್ಲಿ ಸಂಗ್ರಹಣೆ ಮಾಡಿಕೊಂಡು ALBCಯಿಂದ ನೀರನ್ನು ತೆಗೆದುಕೊಂಡು

ಮಾಡಬೇಕಾಗಿರುವುದು ನಮ್ಮ ಯೋಜನೆಯಾಗಿತ್ತು. ಆದರೆ ಅದು feasible ಆಗುವುದಿಲ್ಲ ಕೆರೆ ಸಣ್ಣದಾಗುತ್ತದೆ ನಾಳೆ ಇದರಲ್ಲಿ ನಮ್ಮ storing capacity sufficient ಆಗುವುದಿಲ್ಲವೆಂದು ಮೂಲವಾಗಿರುವಂಥದ್ದು ಏನಿತ್ತು, ಜಾಕ್‌ವೆಲ್ ಅನ್ನು ನದಿಯ ಮೂಲದಿಂದ ಏನು ಮಾಡಿದ್ದೇವೆ. ಮೂಲಭೂತವಾಗಿ ತಮಗೆ ಹೇಳುವುದೇನೆಂದರೆ, ಈ ಕೆಲಸವನ್ನು ನದಿ ಮೂಲದಿಂದ ಮಾಡುತ್ತಿದ್ದೇವೆ ಹೊರತು ಎ.ಎಲ್.ಬಿ.ಸಿ.ಯಿಂದ ನಾವು ಮಾಡುತ್ತಿಲ್ಲ. ಇನ್ನೊಂದು ವಿಷಯ ಏನೆಂದರೆ, ಫಿಲ್ಟರ್ ಪ್ಲಾಂಟ್ ಈಗಾಗಲೇ establish ಆಗಿದೆ. ಆದರೆ, ಇವತ್ತಿನ ದಿವಸ ಇದು ವ್ಯಾಜ್ಯದಲ್ಲಿದೆ. ಇದು ನನ್ನ ಆಸ್ತಿಯೆಂದು ಯಾರೋ ಕ್ಲೈಂ ಮಾಡಿದ್ದಾರೆ. ಇದರ ಬಗ್ಗೆ ಎರಡು-ಮೂರು ಸಲ ಕೋರ್ಟ್‌ನಿಂದ ಡೈರೆಕ್ಷನ್ ಕೂಡ ಬಂದಿದೆ. ಇವತ್ತಿಗೂ ಕೂಡ ಇದು ಇತ್ಯರ್ಥವಾಗಿಲ್ಲ. ಇದನ್ನು ಕಟ್ಟುವಾಗ ಇದು ನನ್ನದೆಂದು ಯಾರೂ ಕೂಡ ಕ್ಲೈಂ ಮಾಡಲಿಲ್ಲ. ಈ ಕೆಲಸ ಹಿಂದಿನ ಸ್ಕೀಂನಲ್ಲಿಯೇ ಅಂದರೆ ಸುಮಾರು 10-15 ವರ್ಷಗಳ ಹಿಂದೆಯೇ ಮುಗಿದಿದೆ. ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಸ್ಕೀಂ ಮುಗಿದಿತ್ತು. ಆಗ ಇದಕ್ಕೆ ಯಾರೂ ತಕರಾರು ಮಾಡಲಿಲ್ಲ. ಅದು ನನ್ನದೆಂದು ಈಗ ಒಬ್ಬರು ಹೈಕೋರ್ಟ್‌ಗೆ ಮೊರೆ ಹೋಗಿದ್ದಾರೆ. ಈಗ ಅವರಿಗೆ ಡಿಕ್ರಿ ಆಗಿದೆ. ಆದ್ದರಿಂದ, ಇದು ಮತ್ತು ಅದು ಇತ್ಯರ್ಥವಾಗಬೇಕಾಗಿದೆ. ಈ ಕೆಲಸಕ್ಕೆ ಇವೆಲ್ಲವೂ ಕಾರಣಗಳಾಗಿವೆ ವಿನಃ ಬೇರೆ ಯಾವುದೇ ಕಾರಣಗಳು ಇಲ್ಲ. ನಿಮಗೆ ಅಧಿಕಾರಿಗಳು ಸರಿಯಾದ ಮಾಹಿತಿ ಕೊಟ್ಟಿಲ್ಲ ಅನಿಸುತ್ತೆ. ತಾವು ಮತ್ತೊಮ್ಮೆ inspection ಹಾಕಿಕೊಂಡು ಮುದ್ದೇಬಿಹಾಳಕ್ಕೆ ಬರಬೇಕು. ಸದರಿ ಕಾಮಗಾರಿ ಕೂಡ ಸಮರ್ಪಕವಾಗಿ ಆಗುತ್ತಿಲ್ಲ. ಬಹಳ ನಿಧಾನವಾಗಿ ನಡೆಯುತ್ತಿರುವುದರಿಂದ ತೀವ್ರಗತಿಯಲ್ಲಿ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಎರಡು ಯೋಜನೆಗಳಿವೆ. ಅಂದರೆ, ಒಂದು ತಾತ್ಕಾಲಿಕ ಮತ್ತೊಂದು ಶಾಶ್ವತವಾದ ಯೋಜನೆಯನ್ನು ನಾವು ಇಲ್ಲಿ ತೆಗೆದುಕೊಂಡಿದ್ದೇವೆ. ಶಾಶ್ವತವಾಗಿ ತೆಗೆದುಕೊಂಡಿರುವ ಯೋಜನೆ ಸೆಪ್ಟೆಂಬರ್ 2010ರೊಳಗೆ ಮುಗಿಯಬೇಕಾಗಿತ್ತು. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಕೋರ್ಟ್‌ಗೆ ಹೋಗಿ ಡಿಕ್ರಿ ತೆಗೆದುಕೊಂಡು ಬಂದಿದ್ದಾರೆ. ಮತ್ತೆ ಕೊಳವೆ ಮಾರ್ಗವನ್ನು ಅಳವಡಿಸುವಾಗ ಸ್ವಲ್ಪ ಅಡ್ಡಿಪಡಿಸುತ್ತಿದ್ದರಿಂದ ಕಾಮಗಾರಿ ವಿಳಂಬವಾಗಿದೆ. ಕಾಮಗಾರಿಯ ಗುಣಮಟ್ಟದ ಬಗ್ಗೆ ಕೂಡ ತಾವು ಹೇಳಿದ್ದೀರಿ. ತಮಗೆ ಚೆನ್ನಾಗಿ ಗೊತ್ತಿರುವಂತೆ

3rd party inspection ಅನ್ನು ಎರಡು ಏಜೆನ್ಸಿಯಿಂದ ಮಾಡಿಸುತ್ತಿದ್ದೇವೆ. ಇಷ್ಟಾಗ್ಯೂ ಕೂಡ ಒಂದು ನಿಗದಿತ ವೇಳೆಯಲ್ಲಿ ಆ ಕಾಮಗಾರಿ ಮುಗಿಯದೆ ಇರುವುದರಿಂದ ಅಂದರೆ, 2011–12ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದೆಂದು ಹೇಳಿದ್ದಾರೆ. ಗುಣಮಟ್ಟದ ಬಗ್ಗೆ ತಾವು ಆತಂಕ ಮತ್ತು ಸಂಶಯವನ್ನು ವ್ಯಕ್ತಪಡಿಸುತ್ತಿರುವುದರಿಂದ ತಾವು ಈಗಾಗಲೇ ಹೇಳಿದ ಹಾಗೆ ನಾನು ಮುದ್ದೇಬಿಹಾಳ್‌ಗೆ ಬಂದು ಈ ಯೋಜನೆಯನ್ನು ತಮ್ಮ ಜೊತೆಯಲ್ಲಿ ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತೇನೆ. ಕೋರ್ಟ್‌ನ ಡಿಕ್ರಿ ಕೂಡ ತೊಂದರೆಯಾಗುತ್ತಿದೆ ಎಂದು ತಾವು ಹೇಳಿದ್ದೀರಿ. ಇದನ್ನು ಪರಿಹರಿಸಲಿಕ್ಕೆ ಅಗತ್ಯವಾದ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ತಮ್ಮ ಜೊತೆಯಲ್ಲಿಯೇ ನಾನು ಮುದ್ದೇಬಿಹಾಳಕ್ಕೆ ಬಂದು ಇದರ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಸಮರ್ಪಕವಾಗಿ ಅಂದರೆ ನಿಧಾನವಾಗಿ ಮತ್ತು ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿದ್ದೇನೆ. ಎರಡನೆಯದು ಏನೆಂದರೆ, tender clauses ನಲ್ಲಿ ಪೆನಾಲ್ಟಿ ಕ್ಲಾಸ್ ಎಂದು ಇದೆ. ಈಗಾಗಲೇ ಒಂದು ವರ್ಷ ವಿಳಂಬವಾಗಿರುವುದರಿಂದ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇವತ್ತಿನವರೆಗೆ ಅವರನ್ನು inovoke ಮಾಡಿದ್ದೀರಾ? ಈ ರೀತಿಯಾದರೆ, ನಾಳೆ ದಿವಸ ಏನಾಗುತ್ತದೆಂದರೆ, ಮೂರು ವರ್ಷದಲ್ಲಿ ಮಾಡಬೇಕಾಗಿರುವಂಥ ಪ್ರಾಜೆಕ್ಟ್‌ನ್ನು 20 ವರ್ಷಗಳವರೆಗೆ ಮಾಡುತ್ತಾರೆ. ಇದರ ಬಗ್ಗೆ ತಾವೇನು ಹೇಳುತ್ತಿಲ್ಲ. ಅವರಿಗೆ extension ಕೊಟ್ಟಿದ್ದೀರಿ. ಅದರೆ, extension ಅನ್ನು ಯಾವ ಕಾರಣದಿಂದ ಕೊಟ್ಟಿದ್ದೀರಿ?

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ ಟೆಂಡರ್ ಅಗ್ರಿಮೆಂಟ್ ಪ್ರಕಾರ ವಿಳಂಬವಾದರೆ ಅವರ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಆ ಕ್ರಮಗಳನ್ನು ನಾವು ಜರೂರಾಗಿ ಖಂಡಿತವಾಗಿ ಅವರ ಮೇಲೆ ತೆಗೆದುಕೊಳ್ಳುತ್ತೇವೆ. ಈಗ ಎರಡು ವಿಚಾರ ಇದೆ. ಮೊದಲನೆಯದಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು, ಎರಡನೆಯದು ನಿಗದಿತ ವೇಳೆಯಲ್ಲಿ ಇದನ್ನು ಮುಗಿಸಿ ಮುದ್ದೇಬಿಹಾಳ ಪಟ್ಟಣಕ್ಕೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆ ಮಾಡುವುದು. ಅದಕ್ಕೋಸ್ಕರ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನಾನು ಅಲ್ಲಿಗೆ ಬಂದು ಪರಿಶೀಲನೆ ಮಾಡಿ ಕ್ಷಿಪ್ರ ವೇಗದಲ್ಲಿ ಇದನ್ನು ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.